# ಅಡಿಗರ ಭೂಮಿಗೀತದ ನಾಯಕ: ‘ಈಡಿಪಸ್’

**ಚಾಂದ್ ಪಾಷ**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು.

DOI: https://doi.org/10.5281/zenodo.15580894

## ABSTRACT:

ದೊರೆ ಈಡಿಪಸ್ ನ ತಲ್ಲಣ, ಪಾಪ ಪ್ರಜ್ಞೆ, ತಾಯಿಯನ್ನು ಭೋಗಿಸಿದನೆಂಬ ಕಳಂಕ ಇತ್ಯಾದಿ ಎಲ್ಲ ಗುಣಗಳು ಕೂಡ ಅಡಿಗರ ‘ಭೂಮಿಗೀತ’ ದ ನಾಯಕನಿಗೆ ಹೋಲುವಂಥದ್ದು. ಕಣ್ಣು ಕಳೆದುಕೊಳ್ಳುವ ರೂಪಕವು ಪ್ರಭುತ್ವದ ಅತೀವ ದುರಾಸೆ ಮತ್ತು ಅಜ್ಞಾನವನ್ನು ಸೂಚಿಸುತ್ತದೆ. ಸ್ವಸಂಬಂಧಗಳಲ್ಲಿ ಲೈಂಗಿಕತೆ ಅಕ್ರಮವೂ, ಅಪರಾಧವೂ ಆಗಿ ಇರುವ ಈ ದೇಶದಲ್ಲಿ, ಈಡಿಪಸ್ ನ ಹೋಲುವ ಕ್ರಿಯೆಗಳು ನಡೆಯುತ್ತಿವೆ. ಭೂಮಿಯನ್ನು ತಾಯಿ ಎನ್ನುತ್ತಲೇ ಉತ್ತು, ಬಿತ್ತುವ ಪ್ರಕ್ರಿಯೆ ಮಗನೇ ತಾಯಿಯನ್ನು ಭೋಗಿಸಿದ ಹೋಲಿಕೆ ನೀಡಬಲ್ಲದು. ಹಾಗಾಗಿ ಭೂಮಿಗೀತದ ನಾಯಕನಾಗಿ ದೊರೆ ಈಡಿಪಸ್ ನನ್ನು ಅಡಿಗರು ರೂಪಕವಾಗಿ ತಂದಿದ್ದಾರೆಂದು ಈ ಲೇಖನ ಸಾಧಿಸುತ್ತದೆ.

## KEYWORDS:

ದೊರೆ ಈಡಿಪಸ್, ಭೂಮಿಗೀತ, ಪಾಪ ಪ್ರಜ್ಞೆ, ಅನಾಥ ಪ್ರಜ್ಞೆ, ಅಡಿಗರು.

ನವ್ಯತೆಯ ಅತ್ಯಂತ ತೀಕ್ಷ್ಣವಾದ ಮತ್ತು ಸಂಕೀರ್ಣ ರೂಪಕ, ಪ್ರತಿಮೆಗಳಿಂದಾಗಿ ಖ್ಯಾತಿ ಪಡೆದುಕೊಂಡಿರುವ ಗೋಪಾಲಕೃಷ್ಣ ಅಡಿಗರ ‘ಭೂಮಿಗೀತ’ ಕವಿತೆಯು ಒಂದೇ ಅರ್ಥದ ಹಿಡಿತಕ್ಕೆ ಸಿಕ್ಕಿಲ್ಲವೆಂಬುದೇ ವಿಶೇಷ. ಈ ಕವಿತೆ ಕಾಲಕಾಲಕ್ಕೆ ತನ್ನೊಳಗಿನ ಅರ್ಥ ವಿಸ್ತಾರತೆಯ ಅನಂತ ಸಾಧ್ಯತೆಗಳನ್ನು ವಿವರಿಸುತ್ತಲೇ ಇರುವ ‘ಅರ್ಥಕೋಶ’ ಮಾದರಿಯ ಕವಿತೆ ಎಂದೇ ಹೇಳಬೇಕು. ಮನುಷ್ಯನ ಅತಂತ್ರ ಸ್ಥಿತಿಯು ಪ್ರಕೃತಿಯೊಂದಿಗೆ ಸಮಾಗಮ ಬಯಸುವ ಅಥವಾ ಹೊಂದಾಣಿಕೆ ಹೊಂದಲು ಹೆಣಗಾಡುವ ವಿಷಮ ಸ್ಥಿತಿಯನ್ನು ಅಡಿಗರು ಈ ಕವಿತೆಯಲ್ಲಿ ವಿವರಿಸಲು ಯತ್ನಿಸಿದ್ದಾರೆ. ಇದೊಂದು ಭಿನ್ನ ಪ್ರಯೋಗಶೀಲ ಕಾವ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ.

ಆದರೆ, ಇಡೀ ಕವಿತೆ ಪ್ರಕೃತಿ ಮತ್ತು ಮನುಷ್ಯನ ಸಾಮಿಪ್ಯದ ಜೊತೆಯಲ್ಲಿ ತಾಯಿ–ಮಗನ ಮಿಲನದ ಸಾಂಕೇತಿಕ ಪ್ರತಿಮೆಗಳಿಂದಲೂ ತುಂಬಿವೆ. ಮನುಷ್ಯನೊಳಗೆ ಇರಬಹುದಾದ ತಾಯಿಗಂಡತನವನ್ನು ಈ ಕವಿತೆ ಮಾತಾಡಿದೆ. ಇದು ಪಾಶ್ಚಾತರಲ್ಲಿ

ಇರುವಷ್ಟು ಸಹಜವಾದ ಹಾಗೂ ಸರಳವಾದ ಸಿದ್ಧಾಂತವಲ್ಲ. ಭಾರತೀಯ ಸಾಂಪ್ರದಾಯಿಕ ಮನಸ್ಥಿತಿಯೊಳಗೆ ಲೈಂಗಿಕತೆಗಿರುವ ಮಡಿವಂತಿಕೆ ಪಾಶ್ಚಾತ್ಯದಲ್ಲಿ ಅಷ್ಟಿಲ್ಲ ಎನಿಸುತ್ತದೆ. ಇದಕ್ಕೆ ಬಹಳ ದೊಡ್ಡ ಉದಾಹರಣೆಯಾಗಿ 'ದೊರೆ ಈಡಿಪಸ್' ವೃತ್ತಾಂತವನ್ನು ಗಮನಿಸಬಹುದು.

'ಲೈಂಗಿಕತೆ' ಎಂಬುದು ಪ್ರಕೃತಿ ಸಹಜವಾದ ಪ್ರಕ್ರಿಯೆ. ಗಂಡು-ಹೆಣ್ಣು ಅಥವಾ ಸ್ವಲಿಂಗಿಗಳ ಪರಸ್ಪರ ಆಕರ್ಷಣೆಯು ಲೈಂಗಿಕತೆಗೆ ಅವಕಾಶ ಒದಗಿಸಬಲ್ಲದು. ಹಸಿವಿನಷ್ಟೇ ಮುಖ್ಯವೆನಿಸಿಕೊಂಡಿರುವ ಮೈಥುನವು ಜೀವ ಸೃಷ್ಟಿಯ ಸಂವೇದನೆಯೂ ಹೌದು, ಹಾಗೂ ಸಹಜ ಸಂತೃಪ್ತಿಯ ಕ್ರಿಯೆಯು ಹೌದು.

ಗೋಪಾಲಕೃಷ್ಣ ಅಡಿಗರ ಬಹುಮುಖ್ಯ ಕವಿತೆ ಎನಿಸಿಕೊಂಡಿರುವ ಭೂಮಿಗೀತವು ಹಲವು ಆಯಾಮಗಳಿಂದ ಭಿನ್ನವಾಗಿ ಕಾಡುವ ಕವಿತೆ. ಇದು ಪ್ರಕೃತಿಯೊಳಗಿನ ತಾಯ್ತಿತನವನ್ನು ಹಾಗೂ ಮಗನೊಳಗಿನ 'ತಾಯಿಗಂಡತನ'ವನ್ನು ಹಲವಾರು ರೂಪಕ, ಪ್ರತಿಮೆಗಳಿಂದ ಕಾಣಬಹುದು. "ಈಡಿಪಸ್ಸಿನ ಗೂಢ ಪಾಪಲೇಪಿತ ನಾನು"[1] ಎನ್ನುವ ಸಾಲಿನಿಂದ ಇಡೀ ಕವಿತೆಯ ಅರ್ಥವೂ ಭಿನ್ನ ದಾರಿಗೆ ಒಯ್ಯಬಲ್ಲದು. ಹಾಗೆ ನೋಡಿದರೆ ಕವಿತೆಯ ನಾಯಕನಲ್ಲಿರುವ ತೊಳಲಾಟ ಇಬ್ಬಂಧಿತನ, ಅಪರಾಧಿ ಭಾವ, ಅನಾಥ ಪ್ರಜ್ಞೆ, ನಿರ್ಲಿಪ್ತತತೆ ಎಲ್ಲವೂ ಕೂಡ ದೊರೆ ಈಡಿಪಸ್ ಗೆ ಹೋಲುವಂಥದ್ದು. ಜಗತ್ತಿನ ಬಹುದೊಡ್ಡ ನಾಟಕಕಾರನಾದ ಸಾಫೋಕ್ಲಿಸ್ ರಚಿಸಿದ 'ದೊರೆ ಈಡಿಪಸ್' (ಅನುವಾದ: ಪಿ. ಲಂಕೇಶ್) ನಾಟಕದಲ್ಲಿ ದೊರೆಯ ಪಾಪಪ್ರಜ್ಞೆಯನ್ನು ಮತ್ತು ಅದರಿಂದ ತನ್ನನ್ನು ತಾನು ಶಿಕ್ಷಿಸಿಕೊಳ್ಳಲು ಹುಡುಕ ಹೊರಟ ದಾರಿಯೂ ನಿಜಕ್ಕೂ ಆಘಾತಕಾರಿ ಅನ್ನಿಸುತ್ತದೆ. ಅಂತೆಯೇ 'ಭೂಮಿಗೀತ' ದ ನಾಯಕನು ಕೂಡ.

"ಪ್ರತಿಮೆ ಎಂದರೆ ಕೇವಲ ಸ್ತಬ್ದಚಿತ್ರವಷ್ಟೇ ಅಲ್ಲ. ಕವಿತೆಯುದ್ದಕ್ಕೂ ಬೆಳೆಯುತ್ತ ಹೋಗುವ ಚಲನಶೀಲವಾದ ಪ್ರತಿಮೆಗಳು ಆಧುನಿಕ ಕಾವ್ಯದಲ್ಲಿ ಹೇರಳವಾಗಿ ದೊರೆಯುತ್ತವೆ."[2] ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ ಮಾತಿನಂತೆ ಅಡಿಗರ ಭೂಮಿಗೀತದಲ್ಲೂ ಇಂತಹ ಅನೇಕ ಪ್ರತಿಮೆಗಳನ್ನು ಕಾಣಬಹುದು. ಅವು ತಾಯಿತನದ ಮೂರ್ತಿ ಭಂಜಕತನಗಳಾಗಿ ಹಾಗೂ ತಾಯಿಯನ್ನು ಭೋಗಿಸುವ ಮಗನ ಗಂಡಸ್ತನವಾಗಿ ಕಾಣಿಸುತ್ತವೆ. ಭಾರತೀಯ ಪರಂಪರೆಯ ನೆಲೆಯಲ್ಲಿ ಇದು ಅನೈತಿಕ ಹಾಗೂ ತಾಯಿ ಮಗನ ಸಂಬಂಧಗಳಿಗೆ ಅಂಟಬಹುದಾದ ಕಳಂಕದ ಮಾದರಿ. ಆದರೆ ಪಾಶ್ಚಾತ್ಯದಲ್ಲಿ ಇಷ್ಟು ಗಂಭೀರವಾದ ಅಪರಾಧವೆಂಬಂತೆ ಕಾಣಿಸುವುದಿಲ್ಲ. ಲೈಂಗಿಕತೆ ಎಂಬುದು ಪ್ರಕೃತಿ ಸಹಜ ಪ್ರಜ್ಞೆ ಎಂಬಂತೆ ಕಾಣುತ್ತದೆ. 'ದೊರೆ ಈಡಿಪಸ್' ನಾಟಕದಲ್ಲಿ, ಈಡಿಪಸ್ ತನ್ನ ತಂದೆಯಾದ ಲಾಯಿಸ್ ನನ್ನು

ಹತ್ಯೆಗೈದು, ಅವನ ಪತ್ನಿ ಅಂದರೆ ಈಡಿಪಸ್ ನ ತಾಯಿ ಯೊಕಾಸ್ತಾಳೊಂದಿಗೆ ಮದುವೆಯಾಗಿ ಅವಳಿಂದ ಮಕ್ಕಳ ಪಡಿಯುತ್ತಾನೆ. ಇದೊಂದು ವಿಷಮರತಿ ಸನ್ನಿವೇಶ ಆದರೆ ಇದನ್ನು ವಿಧಿದುರಂತದ ಮಾದರಿಯಲ್ಲಿ ಚಿತ್ರಿಸಲಾಗಿದೆ. ಮನುಷ್ಯ ತಾನು ಮಾಡಬಹುದಾದ ತಪ್ಪಿನಿಂದ ತಪ್ಪಿಸಿಕೊಳ್ಳಲು ಅಥವಾ ಆ ತಪ್ಪಿಗೆ ತಾನು ನೇರವಾಗಿ ಹೊಣೆಯಲ್ಲವೆಂಬ ಸಮಾಧಾನವನ್ನು ಕಂಡುಕೊಳ್ಳಲು ಈ ತಂತ್ರ ಬಳಸಿದಂತಿದೆ. ಭಾರತೀಯ ಸಂಬಂಧಗಳು ಇಂತಹ ವಿಷಮರತಿಗೆ ಅವಕಾಶ ನೀಡುವುದಿಲ್ಲ. ಏಕೆಂದರೆ, ಸಂಬಂಧಗಳೆಲ್ಲವೂ ಕೂಡ ಪವಿತ್ರಿಕರಣಗೊಂಡಿರುವುದರಿಂದ ಅಣ್ಣ–ತಂಗಿ, ಅಕ್ಕ–ತಮ್ಮ ಅಥವಾ ತಾಯಿ–ಮಗ, ತಂದೆ–ಮಗಳು ಹೀಗೆ ಸ್ವಸಂಬಂಧಗಳಲ್ಲಿ ಲೈಂಗಿಕ ಪ್ರಜ್ಞೆ ಎಂಬುದು ನಿಷೇಧಿತ ಅಥವಾ ಅಪರಾಧಿತ ಭಾವವಾಗಿ ಚಾಲ್ತಿಯಲ್ಲಿದೆ. ಇದಕ್ಕೆ ಅಪವಾದ ಎಂಬಂತೆ ಶಿವಕೋಟ್ಯಾಚಾರ್ಯ ರಚಿಸಿದ ವಡ್ಡಾರಾಧನೆಯಲ್ಲಿ ಬರುವ ಕಾರ್ತಿಕ ಋಷಿಯ ಕಥೆ. ತಂದೆಯೇ ಮಗಳನ್ನು ಮದುವೆಯಾಗಿ ಮಗುವನ್ನು ಪಡೆಯುವ ವಿಲಕ್ಷಣದ ಕಥಾವಸ್ತು ಉಂಟು. ಅಲ್ಲದೇ ಗಿರೀಶ್ ಕಾರ್ನಾಡ್ ಅವರ 'ಅಂಜು ಮಲ್ಲಿಗೆ' ನಾಟಕದಲ್ಲಿಯೂ ಸೋದರ–ಸೋದರಿಯ ನಡುವಿನ ಲೈಂಗಿಕ ಸಂಬಂಧದ ಕುರಿತು ಬೆಳಕು ಚೆಲ್ಲುತ್ತದೆ.

'ಭೂಮಿಗೀತ'ರ ನಾಯಕನದ್ದು ಪಾಪಪ್ರಜ್ಞೆಯ ಧೋರಣೆ. ಬದುಕಿನ ಹಲವಾರು ಪಾಪಗಳ ಕ್ರೂಢೀಕೃತ ಮೊತ್ತದ ರೀತಿಯಲ್ಲಿ ತಾಯಿಯ ಗರ್ಭವನ್ನೇ ಬಯ್ಯುವ, ಅಸಹ್ಯ ಪಡುವ ರೀತಿ 'ಅನ್ಯತೆ'ಯ ಅಳಲನ್ನು ತೋರಿಸುತ್ತದೆ. "ಇವಳ ಹೊಟ್ಟೆ ಚರಂಡಿಗಾರು ಕುಕ್ಕಿದರಯ್ಯ, ಕಳ್ಳ ಬಸುರಿನ ಯಾವ ಜಾಣ ರಂಭೆ?" ತಾಯಿಯ ಗರ್ಭವೇ ಮನುಷ್ಯನ ಗರ್ಭಗುಡಿ ಎನ್ನಬಹುದಾದ ಭಾರತೀಯ ಸಂಪ್ರದಾಯಿಕ ಮನಸ್ಥಿತಿಯನ್ನು ಹೊಡೆದು ಹಾಕುವಂತೆ; ಇಲ್ಲಿ ನಾಯಕ 'ಹೊಟ್ಟೆ ಚರಂಡಿಗೆ' ಹೋಲಿಸುತ್ತಾನೆ. ಇವಳ ಬಸರಿನಿಂದ ಹುಟ್ಟಿ ಬಂದಿದ್ದಕ್ಕೆ ಪಶ್ಚಾತಾಪವಿದೆ. ಇದೇ ಬಗೆಯ ಪಶ್ಚಾತಾಪವನ್ನು ದೊರೆ ಈಡಿಪಸ್ ಕೂಡ ಅನುಭವಿಸಿದ್ದಾನೆ.

**"ಮೈಯಲ್ಲ ಹೆರಿಗೆ ಮನೆ ಮಸಣ ಇವಳಿಗೆ ಸ್ವರತಿ ಸಂಪ್ರೀತಿ,**
**ಹುಲಿ, ಚಿರತೆ, ಆನೆ, ಆಡು, ಕೋಡಗ, ಕತ್ತೆ;**
**ಮಾವು, ನೇರಳೆ, ಹಲಸು, ಜಾಲಿ, ಜಾಜಿ–**
**ಇವು ಇವಳ ಸಹಜ ಸಂತಾನ:**
**ಈ ಪೆಡಂಭೂತ ನಾ ಬರುವ ಗಳಿಗೆಯೋಳಿಗೇಕೆ ಹುಟ್ಟಿತೋ ವಿಷಮರತಿ ದುರಾಶೆ?"**[3]

ಈ ಮೇಲಿನ ಮೊದಲ ಸಾಲನ್ನು ಗಮನಿಸಿದರೆ ತಾಯಿಯ ಮೈ, ಹುಟ್ಟು ಮತ್ತು ಸಾವಿನ ಆಗಮ್ಯ ಸ್ಥಾನವಾಗಿದೆ. ಹೆರಿಗೆ ಮತ್ತು ಮಸಣ ಎಂಬ ಅವಳಿ ವೈರುಧ್ಯಗಳು ಇವಳಲ್ಲಿ ಐಕ್ಯವಾಗಿದೆ. ಈ ಅವಳಿ ವೈರುಧ್ಯದಲ್ಲಿ ಭೂಮಿಗೀತದ ನಾಯಕ ಅಂದರೆ ಈಡಿಪಸ್ ನರಳುತ್ತಿರುವುದು. ಎಲ್ಲಿಂದ ಹುಟ್ಟಿದನೋ, ಅಲ್ಲೇ

ಬದುಕಿನ ಕೊನೆಗಾಣಿಸಬಹುದಾದ ಭೀಕರ ಅಪರಾಧಕ್ಕೆ ಕಾರಣನಾಗುತ್ತಾನೆ. ತಾನು ಹುಟ್ಟುವ ಮೊದಲೆ ಹುಟ್ಟಿದ ಈ ಪೆಡಂಭೂತ ಅದು ತಾಯಿಯೂ ಹೌದು ಮತ್ತು ವಿಷಮರತಿಯೂ ಹೌದು. ಲೋಕ ದೃಷ್ಟಿಯಲ್ಲಿ ನಿರ್ಬಂಧಿತ ಲೈಂಗಿಕ ದುರಾಸೆದು. ಪ್ರಾಣಿಗಳಲ್ಲಿ ವಿಷಮರತಿ ಎಂಬುದು ಸಹಜಕ್ರಿಯೆ. ಮರಿಯಿಂದಲೇ ಗರ್ಭ ಧರಿಸುವ ತಾಯಿತನವನ್ನು ಪಡೆಯುವ ರೀತಿ ಪ್ರಾಣಿ ಸಂಕುಲದಲ್ಲಿ ಉಂಟು. ಭೂಮಿಗೀತದಲ್ಲಿಯೂ ಕೆನೆದು ಕುಣಿವ ಮರಿ ಕುದುರೆಯ ಚಿತ್ರಣವಿದೆ.

**"ಬಂಗಾರದ ಕಡಿವಾಣ, ರನ್ನ ಲಗಾಮು**
**ತಲೆ ಮೇಲೆ ಮೂರು ಬಣ್ಣದ ಮಕುಟಗರಿ ಬೆಡಗು;**
**ಹಿಂದೆ ಕರಕರಟರು ಷಾಃಪಸಂದಿನ ತೊಡವು"[4]**

ಈ ಮರಿ ಕುದುರೆಯ ಬಂಗಾರ, ರನ್ನ, ಬಣ್ಣದ ಮಕುಟಗರಿಯೂ ಪ್ರಭುತ್ವದ ಸಂಕೇತಗಳಾಗಿದ್ದು, ಇವೆಲ್ಲವೂ ಈಡಿಪಸ್ಸಿನ ರಾಜತ್ವವನ್ನು ಪ್ರತಿನಿಧಿಸುತ್ತದೆ. ಅಷ್ಟೇ ಅಲ್ಲದೆ 'ಅಶ್ವ'ವೆಂಬುದು ನವ್ಯದ ಬಹುಮುಖ್ಯವಾದ ಕಾಮದ ಪ್ರತಿಮೆ. ಇಲ್ಲಿಯೂ ಈಡಿಪಸ್ ಕೂಡ ಹಾಗೆಯೇ "ನಡಮುರಿವ ತನಕ ನಡೆದದ್ದೆ ಸುಗ್ಗಿಯ ಕುಣಿತ" ದಲ್ಲಿ ನಿತ್ರಾಣಗೊಳ್ಳಬಹುದಾದ ರತಿಕ್ರೀಡೆಯ ವಿವರಣೆಯನ್ನು ಅಡಿಗರು ನೀಡುತ್ತಾರೆ. "ಎಣ್ಣೆ ತೀರುತಲಿರೆ ಒಡಕು ಹಣತೆಯ ಮುಂದೆ ಬತ್ತಿ ಹೊಸೆತ" ಈಗಾಗಲೇ ಯೌವನವನ್ನು ಕಳೆದುಕೊಂಡವಳ ಅಥವಾ ಕಳೆದುಕೊಳ್ಳುತ್ತಿರುವ ಯೊಕಾಸ್ತಾಳೊಂದಿಗೆ ರತಿಕ್ರಿಡೆಯಲ್ಲಿ ತೊಡಗುವ ಮರಿ ಕುದುರೆಯಂತೆ ಈ ಈಡಿಪಸ್ ಕಾಣುತ್ತಾನೆ. ಎಣ್ಣೆ ತೀರುತ್ತಲಿರುವ ಒಡಕು ಹಣತೆಯ ಮುಂದೆ ಬತ್ತಿ ಹೊಸೆಯುವ ರೀತಿಯಲ್ಲಿ ಕಾಮ ಪ್ರಜ್ಞೆ ಜಾಗೃತವಾಗುತ್ತಿದೆ. ಎಂಬ ರೂಪಕಗಳು ಇಲ್ಲಿ ಕೆಲಸ ಮಾಡುತ್ತಿವೆ.

ತನ್ನ ಬದುಕಿನ ಕೊನೆ ದಿನಗಳನ್ನು ಎಣಿಸಬೇಕಾದ ತಾಯಿಯೂ ಕೂಡ ಅವಳಿಗಿನ್ನೊಂದು ಹೆರಿಗೆಯಾಗುವುದು ತಾಯಿ-ಮಗನ ಸಂಸಾರದ ವಿಲಕ್ಷಣ ಪ್ರಕೃತಿ ನಿಯಮವನ್ನು ಇಲ್ಲಿ ಕಾಣಬಹುದು.

**"ಈಡಿಪಸ್ಸಿನ ಗೂಢ ಪಾಪಲೇಪಿತ ನಾನು;**
**ಟ್ರ್ಯಾಕ್ಟರನ್ನೇರಿದೆನು: ಉತ್ತೆ, ಸಿಗಿದೆ**
**ಬಿತ್ತಿದೆನು, ಬೆಳೆದೆ ಆಟಂಬಾಂಬು ಕಾಳುಗಳ;**
**ಮಾರಕಕ್ರಿಮಿಪೈರ ಗೋರಿ ನಲಿದೆ."[5]**

ಉತ್ತು, ಬಿಗಿದು, ಬಿತ್ತಿ, ಬೆಳೆ ಇತ್ಯಾದಿಗಳೆಲ್ಲವೂ ಲೈಂಗಿಕ ಪ್ರತಿಮೆಗಳಲ್ಲದೆ ಬೇರೇನೂ ಅಲ್ಲ. 'ಭೂಮಿ ತಾಯಿ' ಎನ್ನುತ್ತಲೇ ಉತ್ತು, ಬಿತ್ತುವ ಕಾಯಕವೂ ಸಹಜ ಅನ್ನಿಸಿದರೂ, ಇದು ವಿಷಮರತಿಯ ಗ್ರಹಿಕೆಯಂತೆಯೂ ಕಾಣಬಲ್ಲದು. ಈಡಿಪಸ್‌ನು ತಾಯಿಯಿಂದ ಸಂತಾನ ಸೃಷ್ಟಿಸಿದಂತೆಯೇ ಭೂಮಿಯಿಂದ ಬಿತ್ತಿ ಬೆಳೆದಂತೆಯೇ ಅನ್ನಿಸುತ್ತದೆ. ಈ ಪ್ರಜ್ಞೆಯನ್ನು ಅಡಿಗರು ವಿವರಿಸಲೆಂದೇ ದೊರೆ ಈಡಿಪಸ್ಸನ್ನು ಈ

ಕಾವ್ಯದ ನಾಯಕನಾಗಿಸಿರಬೇಕು. 'ಗೂಢ ಪಾಪಲೇಪಿತ'ನಾದ ಭೂಮಿಗೀತದ ನಾಯಕನದ್ದು ಮತ್ತು ಪಿತೃ ಹಂತಕ ಈಡಿಪಸ್ಸ್ ನದ್ದು ಒಂದೇ ಚಡಪಡಿಕೆ. ಸತ್ಯದ ಅರಿವಾಗಲು ಕ್ರಮಿಸಬೇಕಾದ ದಾರಿ ಸಾಕ್ಷಿಗಳ ವಿಚಾರಣೆ, ನೆನಪುಗಳ ಪೋಣಿಸುವಿಕೆ, ಅಧಿಕಾರ ಕಳೆದುಕೊಳ್ಳುವ ಆತಂಕ ಎಲ್ಲವೂ ಕೂಡ ಭೂಮಿಗೀತದ ನಾಯಕನ ಅನಾಥ ಪ್ರಜ್ಞೆಯಲ್ಲಿ ಕಾಣಿಸುತ್ತವೆ. ಅತೃಪ್ತ ಭಾವದಲ್ಲಿ ಸದಾ ಕಾಲ ಎಲ್ಲವನ್ನು ನಿಂದಿಸುವ, ಅನುಮಾನಿಸುವ ಹಾಗೂ ತನ್ನನ್ನೇ ತಾನು ಹಂಗಿಸಿಕೊಳ್ಳುವ ರೀತಿಯನ್ನು ಅಡಿಗರು ವಿವರಿಸಿದ್ದಾರೆ. "ಎಲ್ಲ ಕಷ್ಟ, ಸಾಹಸಗಳ ನಂತರ ಅಧಿಕಾರ ಪಡೆದ ನಿರಂಕುಶ ಪ್ರಭುಗಳು ಯಾವಾಗಲೂ ತಾವು ಅಧಿಕಾರವನ್ನು ಕಳೆದುಕೊಳ್ಳಬಹುದು ಎಂಬ ಭಯದಲ್ಲಿಯೇ ಇರುತ್ತಿದ್ದರು ಈಡಿಪಸ್ಸಿನಂತೆ"[6] ಎಂದು ಮಿಶಲ್ ಫುಕೋ ಹೇಳುತ್ತಾನೆ.

ಹೀಗೆ ಅಡಿಗರ ಇಡೀ ಕವಿತೆಯಲ್ಲಿ ಪಾಪಪ್ರಜ್ಞೆಯಿಂದ ತೊಳಲಾಡುವ ಹಾಗೂ ತನ್ನ ಪಾಪಕ್ಕೆ ಶಿಕ್ಷೆವೆಂಬಂತೆ ಕಣ್ಣನ್ನೇ ಕಳೆದುಕೊಳ್ಳುವುದು ಬದುಕಿನಲ್ಲಿ ಘಟಿಸಿದ ಅರಿವಿಲ್ಲದ ತಪ್ಪಿಗೆ ಕಣ್ಣು ಕಳೆದುಕೊಳ್ಳುವುದೇ ಸರಿಯಂದು ದಾರಿಯನ್ನು ಹಾಗೆ ಈಡಿಪಸ್ ತೀರ್ಮಾನ ತೆಗೆದುಕೊಳ್ಳುತ್ತಾನೆ.

**"ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ;**
**ದಾರಿ ಸಾಗುವುದೆಂತೂ ನೋಡಬೇಕು"[7]**

ಪಾಪಪ್ರಜ್ಞೆಯಿಂದ ಕಣ್ಣು ಕಳೆದುಕೊಂಡ ಈಡಿಪಸ್ಸ್ ಅಥವಾ ಭೂಮಿಗೀತದ ನಾಯಕ ಬದುಕಿನ, ಬಯಕೆಗಳ ಹೆಳೆತನದ ಮೇಲೆ ಸಾಗುವ ಕುರುಡನಾಗುತ್ತಾನೆ. ಇದು ದೈಹಿಕ ಕುರುಡುತನ ಮಾತ್ರವೇ ಆಗಿರದೆ ಪ್ರಭುತ್ವಗಳ ಅಜ್ಞಾನ ಮತ್ತು ಅತಿರೇಖದ ತಪ್ಪುಗಳಿಗೆ ತೆರಬೇಕಾದ ದಂಡವು ಆಗಿ ಕಾಣಿಸುತ್ತದೆ. ಈ ನಿಟ್ಟಿನಲ್ಲಿ ಭೂಮಿಗೀತ ಒಂದು ವಿಶಿಷ್ಟ ಪ್ರಯೋಗಶೀಲ ಕವಿತೆ.

## ಕೊನೆ ಟಿಪ್ಪಣಿಗಳು:

1. ಸುಮತೀಂದ್ರ ನಾಡಿಗ (ಸಂ), (2010), ಅಡಿಗರ ಸಮಗ್ರ ಕಾವ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.ಸಂ. 265
2. ಲಕ್ಷ್ಮಿನಾರಾಯಣ ಭಟ್ಟ ಎನ್.ಎಸ್., (2010), ಕಾವ್ಯ ಪ್ರತಿಭೆ, ಅಂಕಿತ ಪುಸ್ತಕ, ಬೆಂಗಳೂರು, ಪು.ಸಂ. 07
3. ಸುಮತೀಂದ್ರ ನಾಡಿಗ (ಸಂ), (2010), ಅಡಿಗರ ಸಮಗ್ರ ಕಾವ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.ಸಂ. 266
4. ಅದೇ, ಪು.ಸಂ. 265
5. ಅದೇ, ಪು.ಸಂ. 265
6. ಗುಂಡೂರ ಎನ್ಎ.ಸ್., (2022), ವರ್ತಮಾನದ ಇತಿಹಾಸಕಾರ ಮಿಶೆಲ್ ಫುಕೋ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ಪು.ಸಂ. 81
7. ಸುಮತೀಂದ್ರ ನಾಡಿಗ (ಸಂ), (2010), ಅಡಿಗರ ಸಮಗ್ರ ಕಾವ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.ಸಂ. 267

## ಪರಾಮರ್ಶನ ಗ್ರಂಥಗಳು:

1. ಸುಮತೀಂದ್ರ ನಾಡಿಗ (ಸಂ), (2010), ಅಡಿಗರ ಸಮಗ್ರ ಕಾವ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
2. ಲಕ್ಷ್ಮಿನಾರಾಯಣ ಭಟ್ಟ ಎನ್.ಎಸ್., (2010), ಕಾವ್ಯ ಪ್ರತಿಭೆ, ಅಂಕಿತ ಪುಸ್ತಕ, ಬೆಂಗಳೂರು.
3. ಗುಂಡೂರ ಎನ್ಎ.ಸ್., (2022), ವರ್ತಮಾನದ ಇತಿಹಾಸಕಾರ ಮಿಶೆಲ್ ಫುಕೋ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.